# ನಗರಸಭೆ ಚಿಕ್ಕಬಳ್ಳಾಪುರ

## ಚಿಕ್ಕಬಳ್ಳಾಪುರ ಜಿಲ್ಲೆ

## ಇ – ಟೆಂಡರ್ ಪ್ರಕಟಣೆ (Standard Bidding Document K/W-1)

ಸಂ:ನಸಚಿ/ಟೆ.ಪ್ರ/13ನೇ ಹಣಕಾಸು/1/2011–12 ದಿನಾಂಕ: 28/04/11

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಮೆ|| ಕಿಯೋನಿಕ್ಸ್ ರವರ ಸಹಯೋಗದೊಂದಿಗೆ ಚಿಕ್ಕಬಳ್ಳಾಪುರ ನಗರ ವ್ಯಾಪ್ತಿಯಲ್ಲಿ 2010–11ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ಈ ಕೆಳಗೆ ನಮೂದಿಸಿರುವ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡ ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಇಲ್ಲಿ ಇ – ಟೆಂಡರ್‌ಗಾಗಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಇ – ಟೆಂಡರ್‌ಗಳನ್ನು ( ಇ–ಪ್ರೊಕ್ಯೂರ್‌ಮೆಂಟ್ ಪದ್ದತಿ) ಆಹ್ವಾನಿಸಲಾಗಿದೆ. ಈ ಟೆಂಡರ್‌ಗಳಿಗಾಗಿ ಇಲಾಖಾ ವೆಬ್ ಸೈಟ್ www.tenderwizard.com/DUDCCKB ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.

ಎಲ್ಲಾ ಟೆಂಡರ್‌ಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ, ಚಿಕ್ಕಬಳ್ಳಾಪುರ ಜಿಲ್ಲೆರವರು ಕಛೇರಿಯಲ್ಲಿ ಈ ಕೆಳಗೆ ಪ್ರಕಟಿಸಿದ ದಿನಾಂಕದಂದು ವಿತರಿಸಲಾಗುವುದು ಹಾಗೂ ಇದೇ ಕಛೇರಿಯಲ್ಲಿ ತೆರೆಯಲಾಗುವುದು.

| | | |
|---|---|---|
| 1 | ಇ – ಟೆಂಡರ್‌ಗಾಗಿ ಗುತ್ತಿಗೆದಾರರು ಅಂತರ್ಜಾಲದ ಮುಖಾಂತರ ಖಾಲಿ ಟಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ | 6/6/2011 ರಂದು ಬೆಳಿಗ್ಗೆ 10.30 ಗಂಟೆಯಿಂದ |
| 2 | ಗುತ್ತಿಗೆದಾರರಿಗೆ ಖಾಲಿ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ನೀಡುವ ದಿನಾಂಕ | 30/6/2011 ರಂದು ಸಂಜೆ 5.00 ಗಂಟೆಯವರೆಗೆ |
| 3 | NEFT ಮುಖಾಂತರ ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 1/7/2011 ರಿಂದ ಬೆಳಿಗ್ಗೆ 10.30 ಗಂಟೆಯಿಂದ |
| 4 | ಭರ್ತಿ ಮಾಡಿದ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ನಮೂದಿಸುವ ಕಡೆಯ ದಿನಾಂಕ | 2/7/2011 ರಂದು ಸಂಜೆ 5.00 ಗಂಟೆಯವರೆಗೆ |
| 5 | ಸ್ವೀಕೃತವಾದ ಇ ಟೆಂಡರ್‌ಗಳನ್ನು ತೆರೆಯುವ ದಿನಾಂಕ | 4/7/2011 ರಂದು ಬೆಳಿಗ್ಗೆ 11.00 ಗಂಟೆಗೆ |
| ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಗಳನ್ನು ಪರಿಗಣಿಸಲಾಗುವುದು | | |

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಗುತ್ತಿಗೆದಾರರು ನೀಡಬೇಕಾದ ಇ.ಎಂ.ಡಿ. (ರೂ. ಲಕ್ಷಗಳಲ್ಲಿ) | ಇ – ಟೆಂಡರ್ ಫಾರಂನ ಬೆಲೆ | ಅರ್ಹರಿರುವ ಗುತ್ತಿಗೆದಾರರ ದರ್ಜೆ | ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಅವದಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಪ್ಯಾಕೇಜ್ – 1<br>1. ನ್ಯೂಮಿಡ್ಲ್ ಸ್ಕೂಲ್ ರಸ್ತೆಯಿಂದ ಗಂಗಮ್ಮ ಗುಡಿ ರಸ್ತೆಯ ಮುಖಾಂತರ ಅಲ್ಲಾ ಗುಡಿಯವರೆಗೆ ಡೆಕ್ ಸ್ಲಾಬ್ ಹಾಗೂ ಆರ್.ಸಿ.ಸಿ. ಚರಂಡಿ ನಿರ್ಮಾಣ ಮಾಡಿ ಮೇಲೆ ಆರ್.ಸಿ.ಸಿ. ಸ್ಲಾಬ್ ಹಾಕುವುದು.<br>2. ವಾರ್ಡ್ ಸಂ.9ರಲ್ಲಿ ಅಲಾರ್ ಗುಡಿ ರಸ್ತೆಯಲ್ಲಿ ಚರಂಡಿ ಹಾಗೂ ಆರ್.ಸಿ.ಸಿ. ಸ್ಲಾಬ್ ಹಾಕುವುದು | 10.40 | 26,000/– | 2,600/– | 2ನೇ ದರ್ಜೆ (ಸಿವಿಲ್) | 3 ತಿಂಗಳು |
| 2 | ಪ್ಯಾಕೇಜ್ – 2<br>1. ನಗರಸಭೆಯ ಕಛೇರಿ ಕಟ್ಟಡವನ್ನು ನವೀಕರಿಸುವುದು<br>2. ಈಶ್ವರ ದೇವಸ್ಥಾನದಿಂದ ಡಾ. ವಿಶ್ವನಾಥ್ ಮನೆವರೆಗೆ ಚರಂಡಿ ಮಾಡಿ ಮೇಲೆ ಆರ್.ಸಿ.ಸಿ. ಸ್ಲಾಬ್ ಹಾಕುವುದು<br>3. ನಗರದ ಕಂದವಾರ ಕೆರೆ ತಪ್ಪಲಿನ ಗುರಪ್ಪ ಬಾವಿ ಬಳಿ ಖಾಲಿ ಜಾಗದಲ್ಲಿ ಉದ್ಯಾನವರ ನಿರ್ಮಾಣ ಮಾಡುವುದು | 14.24 | 36,000/– | 3,600/– | 2ನೇ ದರ್ಜೆ (ಸಿವಿಲ್) | 3 ತಿಂಗಳು |

***ಷರತ್ತುಗಳು:–***

1. ಇ–ಟೆಂಡರ್ ದಾಖಲೆಗಳಿಗಾಗಿ ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಕೋರಿಕೆ ಸಲ್ಲಿಸತಕ್ಕದ್ದು ಹಾಗೂ ನಿಗದಿ ಪಡಿಸಿದ ಇ.ಎಂ.ಡಿ. ಮೊತ್ತ ಹಾಗೂ ಇ–ಟೆಂಡರ್ ಪ್ರಕ್ರಿಯೆಯ ಟೆಂಡರ್ ಫಾರಂ ಮೊತ್ತವನ್ನು NEFT ಮುಖಾಂತರ / E-Payment ಮುಖಾಂತರ ಸಲ್ಲಿಕೆಯಾಗುವಂತೆ ಪಾವತಿ ಮಾಡತಕ್ಕದ್ದು.
2. ಮೇಲ್ಕಂಡಂತೆ ಪ್ರಕಟಿತ ಟೆಂಡರ್ ಕಾಮಗಾರಿಗಳು Standard Bidding Documents – KW1 ರ ಪ್ರಕಾರ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ ಹಾಗೂ ಸಂಬಂದಿಸಿದ ಎಲ್ಲಾ ದಾಖಲೆಗಳನ್ನು Online ಮುಖಾಂತರ Upload ಮಾಡುವುದು.
3. ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರು ಟೆಂಡರ್ ಮೊತ್ತದ ಶೇ.50ರಷ್ಟು ಅಂದಾಜಿನ ಕಾಮಗಾರಿಗಳನ್ನು (ಕಾಮಗಾರಿಗೆ ಅನುಗುಣವಾಗಿ) ಹಿಂದಿನ 5 ವರ್ಷಗಳ ಅವಧಿಯ ಯಾವುದಾದರೂ 1 ವರ್ಷದಲ್ಲಿ ನಿರ್ವಹಿಸಿರಬೇಕು ಹಾಗೂ ಕೈಗೊಂಡ ಕಾಮಗಾರಿಯ ವಿವರಣೆಯನ್ನು ಪೌರಾಯುಕ್ತರು / ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ದರ್ಜೆಗೆ ಕಡಿಮೆ ಇಲ್ಲದಂತಹ ಅಧಿಕಾರಿಯ ದೃಢೀಕರಣ ಪತ್ರವನ್ನು ಸಲ್ಲಿಸಬೇಕು.

4. ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದ್ದಲ್ಲಿ, ನಮೂದಿಸಲ್ಪಟ್ಟ ಒಟ್ಟು ಹಾಗೂ ಟೆಂಡರ್‌ಗಿಟ್ಟ ಒಟ್ಟು ಮೊತ್ತದ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮುಖಾಂತರ ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರ ಹೆಸರಿಗೆ ಪಡೆದು ಟೆಂಡರ್‌ಗಳನ್ನು ತೆರೆದ 2 ದಿನಗಳ ಒಳಗಾಗಿ ನೀಡತಕ್ಕದ್ದು, ಇಲ್ಲವಾದಲ್ಲಿ ಅಂತಹ ಗುತ್ತಿಗೆದಾರರನ್ನು ಅನರ್ಹರೆಂದು ಪರಿಗಣಿಸಲಾಗುವುದು.
5. ಷರತ್ತುಗೊಳನ್ನೊಳಗೊಂಡ (Conditional) ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. Standard Bidding Documents ನಿಯಮಾವಳಿಗಳ ಪ್ರಕಾರ ಅನುಮೋದಿತ ಗುತ್ತಿಗೆದಾರರು ಗುತ್ತಿಗೆ ಮೊತ್ತದ ಶೇ.5ರಷ್ಟು ಭದ್ರತಾ ಠೇವಣಿಯನ್ನು ಟೆಂಡರ್ ಕರಾರು ಸಮಯದಲ್ಲಿ ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರ ಹೆಸರಿಗೆ ಪಾವತಿಯಾಗುವಂತೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ನಗದು/ಡಿ.ಡಿ./ಪೇ ಆರ್ಡ್‌ರ್/ಬ್ಯಾಂಕರ್ಸ್ ಚೆಕ್ ರೂಪದಲ್ಲಿ ಸಲ್ಲಿಸುವುದು ತಪ್ಪಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
7. ಕಾಮಗಾರಿಯು ಪೂರ್ಣಗೊಂಡ ನಂತರ 2 ವರ್ಷಗಳವರೆಗೆ ನಿರ್ವಹಣೆಯ ಅವಧಿಯಿದ್ದು, ಎರಡು ವರ್ಷ ಮುಗಿದ ನಂತರ ಕಾಮಗಾರಿಯನ್ನು ಗುಣಮಟ್ಟ ಹಾಗೂ ತೃಪ್ತಿಕರವಾಗಿ ಪೂರೈಸಿರುವ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಂದ ದೃಢೀಕರಣ ನಂತರವೇ ಭದ್ರತಾ ಠೇವಣಿ ಹಣವನ್ನು ಹಿಂತಿರುಗಿಸಲಾಗುವುದು.
8. ಕಾಮಗಾರಿಗೆ ಉಪಯೋಗಿಸುವ ಎಲ್ಲಾ ಸಾಮಾಗ್ರಿಗಳು ಉತ್ತಮ ಗುಣಮಟ್ಟದ್ದಾಗಿರಬೇಕು ಹಾಗೂ ಸಾಮಾಗ್ರಿಗಳ ಗುಣಮಟ್ಟ ಪರೀಕ್ಷೆಯನ್ನು ಸಂಬಂಧಪಟ್ಟ ಇಲಾಖೆಯ ಅಧಿಕೃತ ನಿಯಂತ್ರಣ ಪರಿವೀಕ್ಷಕರಿಂದ ಗುಣ ಮಟ್ಟದ ಪರಿವೀಕ್ಷಣೆ ಮಾಡಿಸಿ ಗುಣಮಟ್ಟದ ಬಗ್ಗೆ ದೃಢೀಕೃತ ಪತ್ರಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಸಿ ಗುಣಮಟ್ಟ ಪರೀಕ್ಷೆ ವರದಿಯನ್ನು ಸಲ್ಲಿಸುವುದು. ಕಾಂಕ್ರೀಟ್ ಕೆಲಸಗಳಿಗೆ ಕಡ್ಡಾಯವಾಗಿ ವೈಬ್ರೇಟರ್ ಉಪಯೋಗಿಸುವುದು.
9. ಕಾಮಗಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಅವಶ್ಯಕವಾಗಿ ಬೇಕಾಗಿರುವ ಯಂತ್ರೋಪಕರಣಗಳು ಹಾಗೂ ಇತರೇ ಸಾಮಾಗ್ರಿಗಳನ್ನು ಗುತ್ತಿಗೆದಾರರು ಒದಗಿಸಿಕೊಳ್ಳುವುದು.
10. ಟೆಂಡರ್ ರದ್ದಾದಲ್ಲಿ ಟೆಂಡರ್ ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಹಾಗೂ ಬೇರೆ ಕೆಲಸಕ್ಕೆ ವರ್ಗಾಹಿಸುವಂತಿಲ್ಲ.
11. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಯಾವುದೇ ಖಾಸಗಿ/ಸಾರ್ವಜನಿಕ ಆಸ್ತಿಗೆ/ಜೀವಹಾನಿ ಸಂಭವಿಸಿದಲ್ಲಿ ಅದರ ಪರಿಹಾರವನ್ನು ಗುತ್ತಿಗೆದಾರರೇ ಭರಿಸಬೇಕಾಗುತ್ತದೆ.
12. ಟೆಂಡರನ್ನು ಇ–ಟೆಂಡರಿಂಗ್ ಮುಖಾಂತರ ಮಾತ್ರ ನಿರ್ವಹಿಸಲಾಗುವುದು. ವಿವರಗಳಿಗೆ www.tenderwizard.com/DUDCKB ರಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಕಿಯೋನಿಕ್ಸ್ ಸಂಸ್ಥೆಯ **9686115314, 080-40482000** ಹಾಗೂ **080-40482105** ನಂಬರನ್ನು ಸಂಪರ್ಕಿಸಬಹುದು.
13. ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಹಣದ ಲಭ್ಯತೆಯನ್ನು ಅನುಸರಿಸಿ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಲಾಗುವುದು.
14. ಗುತ್ತಿಗೆದಾರರ ಟೆಂಡರ್ ಕರೆಗಳಿಗೆ ಒಂದು ವರ್ಷ (ಟೆಂಡರ್ ತೆರೆದ ದಿನಾಂಕದಿಂದ) ಅವಧಿಯ ಸಿಂಧುತ್ವ ಹೊಂದಿರುತ್ತದೆ.
15. ಕಾಮಗಾರಿಗಳು ಪೂರ್ಣಗೊಂಡ ನಂತರ ಮೂರನೇ ಪಾರ್ಟಿಯಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರ ಸಲ್ಲಿಸಿದ ನಂತರ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.
16. ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಪಾಲಿಸದೇ ಇದ್ದ ಪಕ್ಷದಲ್ಲಿ ಇ.ಎಂ.ಡಿ./ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರನ್ನು ವಜಾ ಮಾಡಲಾಗುವುದು.
17. ಕಾಮಾಗಾರಿಯ ಮುನ್ನ, ಪ್ರಗತಿ ವೇಳೆ, ಪೂರ್ಣಗೊಂಡ ನಂತರದ ವಿವಿಧ ಹಂತಗಳ ಒಂದೆ ಸ್ಥಳ ಹಾಗು ಅದೇ ಕೋನಗಳಿಂದ ತೆಗೆದ ಛಾಯ ಚಿತ್ರಗಳನ್ನು ಗುತ್ತಿಗೆದಾರರು ನೀಡಬೇಕಾಗುತ್ತದೆ.
18. ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತಾರೆ.
19. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪೌರಾಯುಕ್ತರು/ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ರವರಿಂದ ಪಡೆಯಬಹುದಾಗಿದೆ.

| | | | |
|---|---|---|---|
| (ಬಿ.ಎ.ಲೋಕೇಶ್ ಕುಮಾರ್) | (ಸಿ.ಮಂಜುಳ ಕೃಷ್ಣಪ್ಪ) | (ವಿ.ವೆಂಕಟೇಶ್) | (ಕೆ.ಎಲ್.ಬಸವರಾಜು) |
| ಅಧ್ಯಕ್ಷರು | ಉಪಾಧ್ಯಕ್ಷರು | ಸ್ಥಾಯಿ ಸಮಿತಿ ಅಧ್ಯಕ್ಷರು | ಪೌರಾಯುಕ್ತರು |
| ನಗರಸಭೆ, ಚಿಕ್ಕಬಳ್ಳಾಪುರ | ನಗರಸಭೆ, ಚಿಕ್ಕಬಳ್ಳಾಪುರ | ನಗರಸಭೆ, ಚಿಕ್ಕಬಳ್ಳಾಪುರ | ನಗರಸಭೆ, ಚಿಕ್ಕಬಳ್ಳಾಪುರ |

ಪೌರಾಯುಕ್ತರು
ನಗರಸಭೆ, ಚಿಕ್ಕಬಳ್ಳಾಪುರ